# <u>5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತಿಪಟೂರು.</u>

27 ನೇ ಜೂನ್ 2026

**ಪೀಠಾಧಿಕಾರಿಗಳುಃ ಹೇಮಂತ್ ಕುಮಾರ್ ಸಿ. ಆರ್**

**ಬಿ.ಎ.ಎಲ್., ಎಲ್ಎಲ್ಬಿ**

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ತಿಪಟೂರು.**

<u>ಎಸ್.ಸಿ.ಸಂಖ್ಯೆಃ 10039/2019</u>

| | |
|---|---|
| **ಫಿರ್ಯಾದಿದಾರರು** | ತುರುವೇಕೆರೆ ಪೊಲೀಸ್ ಠಾಣೆ |

<u>**ವಿರುದ್ಧ**</u>

| | |
|---|---|
| **ಆರೋಪಿಯ ಹೆಸರು** | ಎ 1.ಗೋವಿಂದರಾಜು @ ಕತ್ತೆರಾಜ @ ರಾಜ |
| **ತಂದೆಯ ಹೆಸರು** | ಲೇಟ್ ತಿಮ್ಮಯ್ಯ |
| **ವಯಸ್ಸು** | 44 ವರ್ಷ |
| **ವಾಸ** | ತಂಡಗ ಗ್ರಾಮ, ದಬ್ಬೇಘಟ್ಟ ಹೋಬಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ. |

<u>**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ವಿಚಾರಣೆ**</u>

1. ಅಭಿಯೋಜನೆ ಪರ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ

2. ಚಾ.ಸಾ.1 ಸುಮಾ ರವರನ್ನು ಪ್ರಾ.ಸಾಃ2 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ಘಟನೆ ನಡೆದ ದಿನ ನಾನು ಮತ್ತು ನನ್ನ ಗಂಡ ರಾತ್ರಿ 7.30 ಗಂಟೆ ಸಮಯದಲ್ಲಿ ನಮ್ಮ ಮನೆಯಲ್ಲಿ ಇದ್ದೆವು. ನಂತರ ನನ್ನ ಗಂಡ ಊಟ ಮಾಡಿ ರಾತ್ರಿ 8.00 ಗಂಟೆಗೆ ಮನೆಯಿಂದ ಹೊರಗೆ ಹೋದರು. ಮನೆಯಿಂದ ಹೊರಗೆ ಹೋದವರು ವಾಪಸ್ಸು ಮನೆಗೆ ಬರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

3. ಪ್ರಾ.ಸಾಃ 2 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ರಾತ್ರಿ 9.00 ಗಂಟೆಗೆ ನನ್ನ ಗಂಡ ನನಗೆ ಫೋನ್ ಮಾಡಿದ್ರು. ನಾನು ಹಲೋ ಎಂದೆ ಆತ ಮಾತನಾಡಲಿಲ್ಲ. ನಂತರ ಮರುದಿನ ಬೆಳಿಗ್ಗೆ 6.00 ಗಂಟೆಗೆ ನನ್ನ ಗಂಡನನ್ನು ಯಾರೋ ಕೊಲೆ ಮಾಡಿ ರಾಮಮಂದಿರದ ಹತ್ತಿರ ಕೂರಿಸಿದ್ದಾರೆ ಎಂದು ತಿಳಿಸಿದ್ರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

4. ಪ್ರಾಸಾಃ 2 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಅಲ್ಲಿಗೆ ಹೋಗಿ ನೋಡಿದಾಗ ರಾಮಮಂದಿರದ ಬಳಿ ಅವರ ಪತಿ ಕುಳಿತುಕೊಂಡಿದ್ದ ಸ್ಥಿತಿಯಲ್ಲಿಯೇ ಮೃತಪಟ್ಟಿರುತ್ತಾರೆ. ತಲೆಯ ಎಡಭಾಗಕ್ಕೆ ಹೊಡೆದಿದ್ದರಿಂದ ರಕ್ತಗಾಯ ಆಗಿ ಬಟ್ಟೆಗೆಲ್ಲಾ ರಕ್ತ ಆಗಿತ್ತು ಹಾಗೂ ಮೂಗಿನಲ್ಲಿ ರಕ್ತ ಸುರಿದಿತ್ತು. ಅವರನ್ನು ನೋಡಿದಾಗ ಯಾರೋ ಕೊಲೆ ಮಾಡಿದ್ರು ಅನ್ನಿಸಿತು. ಪೋಲಿಸನವರಿಗೆ ನಾನು ದೂರು ಕೊಟ್ಟೆ. ಪೋಸ್ಟ್ ಮಾರ್ಟಂ ಮಾಡುವಾಗ ನಾನು ಆಸ್ಪತ್ರೆಯಲ್ಲಿ ಇದ್ದಿದ್ದರಿಂದ ಮತ್ತು ನನ್ನ ಕುಟುಂಬದ ಸದಸ್ಯರಿಗೆಲ್ಲಾ ವಿಷಯವನ್ನು ತಿಳಿಸಬೇಕಾಗಿದ್ದರಿಂದ ಅವರಿಗೆ ತಿಳಿಸಿ ನಂತರ ದೂರನ್ನು ಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

5. ಫ್ರಾಸಾಃ 2 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಒಮ್ಮೆ ನನ್ನ ಪತಿ ಮತ್ತು ಗೋವಿಂದರಾಜು ಜಗಳ ಆಡಿಕೊಂಡಿದ್ದನ್ನು ನನ್ನ ಪತಿ ನನಗೆ ಹೇಳಿದ್ರು. ನನ್ನ ಪತಿ ಗೋವಿಂದರಾಜುವಿಗೆ ಕಪಾಳಕ್ಕೆ ಹೊಡೆದಿದ್ರಂತೆ. ನಾನು ಗೋವಿಂದರಾಜುನ ಯಾಕೆ ಜಗಳ ಆಡಿದೆ ಎಂದು ಪ್ರಶ್ನೆ ಮಾಡಿದೆ, ಆಗ ಗೋವಿಂದರಾಜು ನನ್ನನ್ನು ಕುರಿತು ನೀನ್ಯಾವಳೇ ಕೇಳಕ್ಕೆ ಎಂದು ಬೈದಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

6. ಫ್ರಾ.ಸಾಃ 2 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಅದೇ ಜಿದ್ದು ಇಟ್ಟುಕೊಂಡು ಬೇಕರಿ ಹತ್ತಿರ ನನ್ನ ಪತಿಗೆ ಇಟ್ಟಿಗೆಯಲ್ಲಿ ಗೋವಿಂದರಾಜು ಹೊಡೆದ್ರು. ಈ ವಿಚಾರವಾಗಿ ನನ್ನ ಪತಿ ದೂರನ್ನು ಕೊಟ್ಟಿದ್ರು. ಆಗ ಗೋವಿಂದರಾಜು ಇನ್ನು ಮುಂದೆ ಮಾಡಲ್ಲ ಎಂದು ಹೇಳಿದ್ದರಿಂದ ದಂಡ ಕಟ್ಟಿಸಿಕೊಂಡು ಬಿಟ್ಟಿದ್ರು. ಅದೇ ಜಿದ್ದು ಇಟ್ಟುಕೊಂಡು ಗೋವಿಂದರಾಜು ರೀಪಿಸ್ ಪಟ್ಟಿಯಿಂದ ತಲೆಯ ಎಡಭಾಗಕ್ಕೆ ರಾಮ ಮಂದಿರದ ಹತ್ತಿರ ಹೊಡೆದು ಕೊಲೆ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

7. ಫ್ರಾಸಾಃ 2 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿನಾಂಕ 01.03.2019 ರಂದು ಪೋಲಿಸರು ನನ್ನನ್ನು ಪೋಲಿಸ್ ಠಾಣೆಗೆ ಕರೆದಿದ್ರು. ಆಗ ಆರೋಪಿಯು ಸಹಃ ಪೋಲಿಸ್ ಠಾಣೆಯಲ್ಲಿದ್ದ. ಪೋಲಿಸರು ಆತನನ್ನು ತೋರಿಸಿ ನನ್ನ ಪತಿಯನ್ನು ಕೊಲೆ ಮಾಡಿದ್ದು ಆತನೇ ಎಂದು ತಿಳಿಸಿದ್ರು. ನಾನು ಸಹ ಪೋಲಿಸರಿಗೆ ಆತನೇ ನನ್ನ ಪತಿಯನ್ನ ಕೊಲೆ ಮಾಡಿದ್ದು ಎಂದು ಹೇಳಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

8. ಚಾ.ಸಾ.8 ಭೈರಪ್ಪ ಹಾಗೂ ಚಾ.ಸಾ.9 ಈಶ್ವರಪ್ಪ ರವರನ್ನು ಪ್ರಾ.ಸಾ.5 ಮತ್ತು ಪ್ರಾ.ಸಾ.6 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ಮೃತ ಸುರೇಶ್ ರವರು ಸುಮಾರು ಮೂರು ನಾಲ್ಕು ವರ್ಷಗಳ ಹಿಂದೆ ರಾಮಮಂದಿರದ ಬಳಿ ಕೊಲೆಯಾಗಿದ್ದ. ಪೊಲೀಸ್ ನವರು ರಾಮಮಂದಿರದ ಹತ್ತಿರ ಕೊಲೆಯಾದ ಎಂಟು ಹತ್ತು ದಿನಗಳ ನಂತರ ಬಂದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

9. ಚಾಸಾ.18 ಹೆಚ್.ಕುಮಾರಸ್ವಾಮಿ ರವರನ್ನು ಪ್ರಾ.ಸಾ.7 ಎಂದು ವಿಚಾರಣೆ ಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ತುರುವೇಕೆರೆ ಠಾಣೆಯ ಸಬ್ ಇನ್ಸ್ ಪೆಕ್ಟರ್ ರವರು ಕೃತ್ಯ ನಡೆದ ಸ್ಥಳದ ಖಾತಾ ಎಕ್ಸ್ ಟ್ರ್ಯಾಕ್ಟ್ ನ್ನು ನೀಡುವಂತೆ ಕೋರಿದ್ದು, ದಿನಾಂಕ 02.04.2019 ರಂದು ತಂಡಗ ಗ್ರಾಮದಲ್ಲಿರುವ ಶ್ರೀರಾಮಮಂದಿರಕ್ಕೆ ಸಂಬಂಧಿಸಿದಂತೆ ಖಾತಾ ಎಕ್ಸ್ ಟ್ರ್ಯಾಕ್ಟ್ ನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

10. ಚಾ.ಸಾ.19 ಮಾರುತಿ ರವರನ್ನು ಪ್ರಾ.ಸಾ.11 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಂಕ 01.04.2019 ರಂದು ತುರುವೇಕೆರೆ ಪೊಲೀಸ್ ಠಾಣೆಯಿಂದ ದಿನಾಂಕ 16.02.2019 ರಂದು ಸಂಜೆ 8.30 ಗಂಟೆಯಿಂದ 9.30 ಗಂಟೆಯ ವರೆಗೂ ತಂಡಗ ಗ್ರಾಮಕ್ಕೆ ವಿದ್ಯುತ್ ಸರಬರಾಜು ಇತ್ತೇ ಎಂದು ಮಾಹಿತಿಯನ್ನು ಕೇಳಿದ್ರು. ಹಾಗಾಗಿ ಸಂಬಂಧ ಪಟ್ಟ ಲಾಗ್ ಪುಸ್ತಕವನ್ನು ತಂಡಗ ಗ್ರಾಮದ ಉಪಸ್ಥಾವರದಿಂದ ತರಿಸಿ ಪರಿಶೀಲಿಸಲಾಗಿ ಸದರಿ ದಿನಾಂಕ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ತಂಡಗ ಗ್ರಾಮಕ್ಕೆ ಮಾಡಲಾಗಿತ್ತು. ಆದ್ದರಿಂದ ಅದೇ ರೀತಿ ಮಾಹಿತಿಯನ್ನು ತುರುವೇಕೆರೆ ಪಿ.ಐ ರವರಿಗೆ ಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

11. ಚಾ.ಸಾ.26 ಶಿವಕುಮಾರಯ್ಯ.ಎಸ್ ರವರನ್ನು ಪ್ರಾ.ಸಾ.12 ಎಂದು ವಿಚಾರಣೆ ಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಂಕಃ16.02.2019 ರಂದು ಹಗಲು ಎಸ್.ಹೆಚ್.ಒ ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ತಂಡಗ ಗ್ರಾಮದ ಗೋವಿಂದರಾಜು ಎಂಬ ವ್ಯಕ್ತಿಯು ಠಾಣೆಗೆ ಬಂದು ಆತನ ಗ್ರಾಮದಲ್ಲಿ ಸುರೇಶ್ ಹಂದಿ ಭೇಟೆಯಾಡುತ್ತಾನೆಂದು, ಇದರ ಮಾಹಿತಿಯನ್ನು ತಿಳಿಸುವ ಸಲುವಾಗಿ ನನ್ನ ಫೋನ್ ನಂಬರ್ ಕೇಳಿ ಪಡೆದುಕೊಂಡು ಹೋಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

12. ಫ್ರಾಸಾಃ12 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ನಂತರ ಕರ್ತವ್ಯ ಮುಗಿಸಿಕೊಂಡು ಸುಮಾರು ರಾತ್ರಿ 9.00 ಗಂಟೆ ಸಮಯಕ್ಕೆ ಮನೆಗೆ ವಾಪಸ್ ಹೋಗುವಾಗ ಮೊಬೈಲ್ ಸಂಖ್ಯೆ 9632056545 ರಿಂದ ಗೋವಿಂದರಾಜು ನನಗೆ ಫೋನ್ ಮಾಡಿ ಆ ದಿನ ಸುರೇಶ್ ಹಂದಿ ಭೇಟೆಯಾಡುತ್ತಾನೆಂದು ಅದರ ಫೋಟೋ ತೆಗೆದು ಕಳುಹಿಸುತ್ತೇನೆಂದು ತಿಳಿಸಿದ್ದ, ಆದರೆ ಯಾವುದೇ ಚಿತ್ರೀಕರಣವನ್ನು ಗೋವಿಂದರಾಜು ನನಗೆ ಕಳುಹಿಸಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

13. ಫ್ರಾಸಾಃ12 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿನಾಂಕ 01.03.2019 ರಂದು ಗೋವಿಂದರಾಜು ರವರು ಸುರೇಶ್ ರವರನ್ನು ಕೊಲೆ ಮಾಡಿದ್ದಾನೆಂಬ ಆರೋಪದ ಮೇಲೆ ಹಾಜರು ಪಡಿಸಿದಾಗ ನಮ್ಮ ತನಿಖಾಧಿಕಾರಿ ಯವರಿಗೆ ಸದರಿ ವಿಚಾರವನ್ನು ತಿಳಿಸಿದೆ. ಆ ಸಂದರ್ಭದಲ್ಲಿ ವಿಚಾರಣೆ ಮಾಡುವಾಗ ಗೋವಿಂದರಾಜು ರವರಿಗೆ ಸುರೇಶ್ ನ ಮೇಲೆ ಕೆರೆಯಲ್ಲಿ ಮೀನು ಹಿಡಿದು ಹರಾಜು ಹಾಕುವ ವಿಚಾರದಲ್ಲಿ ವೈಷಮ್ಯ ಇತ್ತು ಎಂದು ತಿಳಿದು ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

14. ಫ್ರಾಸಾಃ12 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಈ ವಿಚಾರವಾಗಿ ಗೋವಿಂದರಾಜು ಮತ್ತು ಸುರೇಶ್ ಜಗಳ ಮಾಡಿಕೊಂಡಿದ್ದು ಗೋವಿಂದರಾಜು ಸುರೇಶ್ ಗೆ ಹೊಡೆದ ಬಗ್ಗೆ, ಸುರೇಶ್ ಈ ಹಿಂದೆ ದೂರನ್ನು ನೀಡಿದ್ದರೆಂದು, ಗೋವಿಂದರಾಜು ದಂಡ ಕಟ್ಟಿದ್ದರೆಂದು ಸಹಾ ತಿಳಿಯಿತು. ಈ ಕುರಿತು ಹಿಂದಿನ ದ್ವೇಷದಿಂದ ಗೋವಿಂದರಾಜು ಸುರೇಶ್ ರವರನ್ನು ಹತ್ಯೆ ಮಾಡಿದ್ದಾನೆಂದು ತಿಳಿಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

15. ಚಾ.ಸಾ.2 ಗಜೇಂದ್ರ ರವರನ್ನು ಫ್ರಾ.ಸಾ.13 ಎಂದು ವಿಚಾರಣೆ ಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಕಃ 17.02.2019 ರಂದು ನನ್ನ ತಾಯಿ ಯವರು ಬೆಳಗ್ಗೆ ಸುಮಾರು 7.00 ಗಂಟೆಗೆ ಫೋನ್ ಮಾಡಿ ನಿಮ್ಮ ತಂದೆಗೆ ಹೊಡೆದು ಮೃತಪಟ್ಟಿದ್ದಾರೆ ಬಾ ಎಂದು ಹೇಳಿದರು. ಅದೇ ದಿನ ತುರುವೇಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ನಮ್ಮ ತಂದೆಯನ್ನು ನೋಡಿದೆ. ನಮ್ಮ ತಂದೆಗೆ ತಲೆಯ ಎಡಭಾಗದಲ್ಲಿ ಏಟುಬಿದ್ದು ಗಾಯವಾಗಿತ್ತು ಬಟ್ಟೆಯಲ್ಲಾ ರಕ್ತವಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

16. ಫ್ರಾ.ಸಾಃ13 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ನಂತರ ನಮ್ಮ ತಾಯಿಯವರಿಗೆ ವಿಚಾರಿಸಿದಾಗ ಪಕ್ಕದ ಮನೆಯ ಸುಶೀಲಮ್ಮ ನಿಮ್ಮ ಗಂಡ ಶ್ರೀರಾಮನ ದೇವಸ್ಥಾನದ ಹತ್ತಿರ ಸತ್ತು ಹೋಗಿದ್ದಾರೆ ಎಂದು ವಿಚಾರ ಹೇಳಿದರು. ನಮ್ಮ ತಾಯಿಯವರು ಹೋಗಿ ನೋಡಿದಾಗ ತಂದೆ ದೇವಸ್ಥಾನದ ಬಳಿ ಸತ್ತು ಹೋಗಿರುತ್ತಾರೆ. ನಂತರ ನಮ್ಮ ತಾಯಿಯನ್ನು ಕರೆದುಕೊಂಡು ಹೋಗಿ ದೂರನ್ನು ತುರುವೇಕೆರೆ ಪೋಲೀಸ್ ಠಾಣೆಯಲ್ಲಿ ಕೊಡಿಸಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

17. ಫ್ರಾಸಾಃ13 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ನಮ್ಮ ತಂದೆಯವರು ತೀರಿಹೋದ ಐದು ದಿನಗಳ ನಂತರ ತುರುವೇಕೆರೆ ಪೋಲೀಸ್ ರವರು ನಮ್ಮ ಮನೆಯ ಬಳಿ ಬಂದು ಗೋವಿಂದರಾಜು ಎಂಬುವವರು ಕೊಲೆ ಮಾಡಿದ್ದಾರೆ ಅವರೇನಾ ಎಂದು ಠಾಣೆಯಲ್ಲಿ ಬಂದು ನೋಡಿ ಎಂದು ಹೇಳಿದರು. ನಾನು ನಮ್ಮ ತಾಯಿಯವರು ತುರುವೇಕೆರೆ ಪೋಲೀಸ್ ಠಾಣೆಗೆ ಹೋಗಿದ್ದು ಪೊಲೀಸರನ್ನು ವಿಚಾರಿಸಿದಾಗ, ಗೋವಿಂದರಾಜು ರವರೇ ಪೋಲೀಸರ ಮುಂದೆ ನಾನೇ ರಿಪೀಸ್ ಪಟ್ಟಿಯಲ್ಲಿ ಹೊಡೆದು ಹುಲ್ಲೇಕೆರೆ ಮತ್ತು ಹೊಸೂರು ಕೆರೆಗಳಲ್ಲಿ ಮೀನುಹಿಡಿಯುವ ಟೆಂಡರ್ ವಿಚಾರದಲ್ಲಿ ಜಗಳ ಮಾಡಿಕೊಂಡು ಆ ಹಳೆಯ ದ್ವೇಷದಿಂದ ಕೊಲೆಯನ್ನು ಮಾಡಿರುತ್ತೇನೆ ಎಂದು ನನ್ನ ಎದುರಿಗೆ ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

18. ಫ್ರಾಸಾಃ13 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 17.02.2019 ರಂದು ಸ್ಥಳ ಮಹಜರ್ ಮಾಡಲು ತುರುವೇಕೆರೆಯಿಂದ ತಂಡಗ ಗ್ರಾಮದ ಹತ್ತಿರ ಶ್ರೀರಾಮನ ದೇವಸ್ಥಾನದ ಮುಂಭಾಗ ಪೋಲೀಸರು ಬಂದಿದ್ದರು. ನಾನು ಸದರಿ ಸ್ಥಳವನ್ನು ತೋರಿಸಿದೆ. ಆ ಸ್ಥಳದಲ್ಲಿ ರಕ್ತವಾಗಿರುವ ಮಣ್ಣು, ಮತ್ತು ಸಾದಾಮಣ್ಣನ್ನು ಪ್ರತ್ಯೇಕ ವಾಗಿ ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಸಂಗ್ರಹಿಸಿ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಹೆಚ್ ಎಂಬ ಅಕ್ಷರದಲ್ಲಿ ಸೀಲ್ ಮಾಡಿ, ಅಮಾನತ್ತು ಪಡಿಸಿಕೊಂಡಿರುತ್ತಾರೆ. ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ ಮಹಜರ್ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

19. ಚಾಸಾ.20 ಪ್ರದೀಪ್ ಕುಮಾರ್.ಹೆಚ್.ಎಸ್ ರವರನ್ನು ಫ್ರಾ.ಸಾ.14 ಎಂದು ವಿಚಾರಣೆ ಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಂಕ 02.03.2019 ರಂದು ಸಿ.ಆರ್. ನಂ.14/2019 ಕ್ಕೆ ಸಂಬಂಧಿಸಿದಂತೆ, ಸ್ಥಳದ

ನಕ್ಷೆಯನ್ನು ತಯಾರು ಮಾಡಿಕೊಡುವಂತೆ ತುರುವೇಕೆರೆ ಪೋಲಿಸ್ ಠಾಣೆಯ ಪಿ.ಐ. ರವರು ಪತ್ರ ನೀಡಿದ್ರು. ಸದರಿ ಪತ್ರದಲ್ಲಿ ದಿಃ 16.02.2019 ರಂದು ರಾತ್ರಿ 7.45 ಕ್ಕೆ ಮೃತ ಸುರೇಶ್ ಎನ್ನುವವರು ಮನೆಯಿಂದ ಹೊರಗೆ ಹೋಗಿದ್ದು, ದಿನಾಂಕ 17.02.2019 ರಂದು ಬೆಳಗ್ಗೆ 7.00 ಗಂಟೆಗೆ ತಂಡಗ ಗ್ರಾಮದ ರಾಮಮಂದಿರದ ಹತ್ತಿರ ಸತ್ತು ಬಿದ್ದಿರುತ್ತಾರೆಂದು ದೂರು ದಾಖಲಾಗಿದ್ದು, ಸದರಿ ಸ್ಥಳದ ನಕ್ಷೆಯನ್ನು ತಯಾರು ಮಾಡಿಕೊಡುವಂತೆ ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

20. ಪ್ರಾಸಾಃ14 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿನಾಂಕ 30.03.2019 ರಂದು ಪೋಲಿಸರು ಸ್ಥಳಕ್ಕೆ ಬೇಟಿ ನೀಡಿ ಪೋಲಿಸ್ ಸಿಬ್ಬಂದಿ ಶ್ರೀ ರಾಜು-ಹೆಚ್.ಸಿ. 331 ರವರು ಕೊಟ್ಟ ಮಾಹಿತಿಯಂತೆ ನಕ್ಷೆ ತಯಾರು ಮಾಡಿ ಪತ್ರದೊಂದಿಗೆ ತುರುವೇಕೆರೆ ಪಿ ಐ. ರವರಿಗೆ ಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

21. ಚಾಸಾ.12 ರಾಜು.ಎಂ ರವರನ್ನು ಪ್ರಾ.ಸಾ.15 ಎಂದು ವಿಚಾರಣೆ ಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಂಕ 01.03.2019 ರಂದು ಸಿ. ಆರ್. ನಂ.14/2019 ಕ್ಕೆ ಸಂಬಂಧಿಸಿದಂತೆ, ತುರುವೇಕೆರೆ ಪೋಲಿಸ್ ಠಾಣೆಯ ಪಿ.ಐ. ರವರು ನಮ್ಮ ಕಛೇರಿಯ ಮುಖ್ಯ ಅಧಿಕಾರಿಗೆ ಪತ್ರ ಬರೆದು ಮಹಜರಿಗೆ ಸಾಕ್ಷಿದಾರರಾಗಿ ಕಛೇರಿಯ ನೌಕರರನ್ನು ನಿಯೋಜಿಸಲು ಕೋರಿರುತ್ತಾರೆ. ಅದರಂತೆ ಕಛೇರಿಯ ಮುಖ್ಯಾಧಿಕಾರಿ ನನ್ನನ್ನು ಮತ್ತು ಕಾಂತರಾಜು ಕಂಪ್ಯೂಟರ್ ಆಪರೇಟರ್ ರವರನ್ನು ಮಹಜರಿಗೆ ಸಾಕ್ಷಿದಾರರಾಗಿ ಹೋಗಲು ನಿಯೋಜನೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

22. ಫ್ರಾಸಾಃ15 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಪೋಲಿಸರಿಗೆ ಆರೋಪಿಯು ಕೊಲೆ ಮಾಡಿದ ಜಾಗ ಮತ್ತು ಕೊಲೆಗೆ ಬಳಸಲಾದ ಮರದ ರೀಪಿಸ್ ಅನ್ನು ಮತ್ತು ಆ ಸಂದರ್ಬದಲ್ಲಿ ತೊಟ್ಟಿದ್ದಂತಹ ಬಟ್ಟೆಗಳನ್ನು ಮುಚ್ಚಿಟ್ಟಿದ್ದು ತೋರಿಸುವುದಾಗಿ ಹೇಳಿಕೆ ಕೊಟ್ಟಿರುತ್ತಾನೆ. ನಂತರ ರಾಮಮಂದಿರದ ಸ್ಥಳವನ್ನು ತೋರಿಸಿ ಅದೇ ಜಾಗದಲ್ಲಿ ಕೊಲೆ ಮಾಡಿದ್ದು ಎಂದು ತಿಳಿಸಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

23. ಫ್ರಾಸಾಃ15 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಕೊಲೆಗೆ ಬಳಸಲಾದ ರಿಪೀಸು ಮತ್ತು ಕೊಲೆ ಸಂದರ್ಬದಲ್ಲಿ ಧರಿಸಿದ್ದ ಬಟ್ಟೆಗಳನ್ನು ಮುಚ್ಚಿಟ್ಟಿರುವ ಜಾಗವನ್ನು ತೋರಿಸುತ್ತೇನೆಂದು ರಾಮ ಮಂದಿರದ ಪಶ್ಚಿಮಕ್ಕೆ ಒಂದು ರೋಜಾ ಗಿಡದ ಪೊದೆಯ ಬಳಿ ಕರೆದುಕೊಂಡು ಹೋಗಿ ಅಲ್ಲಿಂದ ಮೂರು ಅಡಿ ಉದ್ದ 6 ಮೊಳೆಗಳು ಇರುವ ರಕ್ತದ ಕಲೆಯಾಗಿರುವ ರೀಪಿಸನ್ನು ತೆಗೆದುಕೊಟ್ಟಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

24. ಫ್ರಾಸಾಃ15 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ನಂತರ ಆರೋಪಿಯ ಮನೆಯ ಬಳಿ ಕರೆದುಕೊಂಡು ಹೋಗಿ ಮನೆಯ ಒಳಗೆ ಮುಖ್ಯ ದ್ವಾರದ ಪಕ್ಕದಲ್ಲಿ ಒಂದು ಬಚ್ಚಲಮನೆ ಇದ್ದು ಅದರ ಒಳಗೆ ಹೋಗಿ ನೀರಿನ ಡ್ರಮ್ ನ ಸಂದಿಯಲ್ಲಿ ಇಟ್ಟಿದ್ದ ಬಟ್ಟೆಗಳನ್ನು ತೆಗೆದುಕೊಟ್ಟಿರುತ್ತಾನೆ ಸದರಿ ವಸ್ತುಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

25. ಚಾ.ಸಾ.21 ಡಾ. ರುದ್ರಮೂರ್ತಿ. ಎಸ್ ರವರನ್ನು ಪ್ರಾ.ಸಾ.16 ಎಂದು ವಿಚಾರಣೆ ಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಂಕ 17.02.2019 ರಂದು ಯು.ಡಿ.ಆರ್. 2/2019 ಕ್ಕೆ ಸಂಬಂಧಿಸಿದಂತೆ, ತುರುವೇಕೆರೆ ಪೋಲಿಸ್ ಠಾಣೆಯ ಪಿ.ಐ. ರವರು ಮೃತ ಸುರೇಶ್ ಬಿನ್ ಶಿವಣ್ಣ, ವಯಸ್ಸು 48 ವರ್ಷ ಇವರ ಮೃತ ದೇಹದ ಶವ ಪರೀಕ್ಷೆಯನ್ನು ಮಾಡಿ ವರದಿ ನೀಡಲು ಮನವಿ ಸಲ್ಲಿಸಿರುತ್ತಾರೆ. ಅದೇ ದಿನ ಸಂಜೆ 4.45 ರಿಂದ 5.45 ವರೆಗೆ ಜಿಲ್ಲಾ ಆಸ್ಪತ್ರೆ ತುಮಕೂರಿನ ಶವಗಾರದಲ್ಲಿ ಮರಣೋತ್ತರ ಪರೀಕ್ಷೆಯನ್ನು ನೆಡೆಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

26. ಫ್ರಾಸಾಃ16 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಶವದ ಮೇಲೆ ರಕ್ತದ ಕಲೆಗಳಿಂದ ಕೂಡಿದ ಬೂದು ಬಣ್ಣದ ಪ್ಯಾಂಟು, ರಕ್ತದ ಕಲೆಗಳಿಂದ ಕೂಡಿದ ಖಾಕಿ ಬಣ್ಣದ ನಿಕ್ಕರ್, ರಕ್ತದ ಕಲೆಗಳಿಂದ ಕೂಡಿದ ಆಂಗ್ಲಭಾಷೆಯಲ್ಲಿ Apoorvas, Saraswathi Puram, Mysore ಎಂದು ಲೇಬಲ್ ಇದ್ದ ಅರ್ಧ ತೋಳಿನ ಬಿಳಿ ಬಣ್ಣದ ಶರ್ಟು, ರಕ್ತದ ಕಲೆಗಳಿಂದ ಕೂಡಿದ ಬಿಳಿ ಮತ್ತು ಹಳದಿ ಬಣ್ಣದ ಟವೆಲ್, ರಕ್ತದ ಕಲೆಗಳಿಂದ ಕೂಡಿದ ಗಡಸು ನೀಲಿ ಬಣ್ಣದ ಆಂಗ್ಲಭಾಷೆಯಲ್ಲಿ Timber land ಎಂದು ಲೇಬಲ್ ಇದ್ದ ಜರ್ಕಿನ್ ಬಟ್ಟೆಗಳು ಇದ್ದವು. ಈ ಎಲ್ಲಾ ಬಟ್ಟೆಗಳನ್ನು ಸಂಬಂದಪಟ್ಟ ಆರಕ್ಷರಲ್ಲಿ ಮೊಹರು ಮಾಡದ ಸ್ಥಿತಿಯಲ್ಲಿ ಹಿಂದಿರುಗಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

27. ಫ್ರಾಸಾಃ16 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಶವದ ಉದ್ದ 170 ಸೆಂ.ಮೀ. ಇದ್ದು ಸಾಧಾರಣಾ ಮೈಕಟ್ಟಿನಿಂದ ಕೂಡಿತ್ತು. ರೈಗರ್ ಮಾರ್ಟೀಸ್ ದೇಹದ ಎಲ್ಲಾ ಭಾಗಗಳಲ್ಲಿ ಇತ್ತು. ಮರಣೋತ್ತರ ಕಲೆಗಳು ದೇಹದ ಹಿಂಭಾಗದಲ್ಲಿ ಇದ್ದವು. ಶವದ ಮೇಲೆ 4 X 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ತರಚಿದ ಗಾಯ ತಲೆಯ ಬಲಭಾಗದಲ್ಲಿದ್ದು, ಅದರ ಕೆಳಗಿನ

ಮೂಳೆಗಳು ಮುರಿದಿದ್ದವು. 2 X 1 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ತಲೆಯ ಎಡಭಾಗದಲ್ಲಿ ಎಡಕಿವಿಯ ಹಿಂಭಾಗದಲ್ಲಿ ಇತ್ತು, ಅದರ ಮೂಳೆಗಳು ಮುರಿದಿದ್ದವು. 6 X 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ತಲೆಯ ಎಡಭಾಗದಲ್ಲಿದ್ದು, ಎಡಕಿವಿಯ 6 ಸೆಂ.ಮೀ. ನ ಅಂತರದಲ್ಲಿ ಇತ್ತು, ಅದರ ಮೂಳೆಗಳು ಮುರಿದಿದ್ದವು. 6 X 0.5 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ಗಾಯದ ಸಂಖ್ಯೆ 3 ರ ಹಿಂದಕ್ಕೆ 3 ಸೆಂ.ಮೀ. ಅಂತರದಲ್ಲಿ ಇತ್ತು, ಅದರ ಮೂಳೆಗಳು ಮುರಿದಿದ್ದವು. 5 X 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ತಲೆಯ ಮೇಲೆ ಇತ್ತು , ಅದರ ಮೂಳೆಗಳು ಮುರಿದಿದ್ದವು. 11 X 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ತರಚಿದ ಗಾಯವು ಎಡಕಿವಿ ಹಾಗೂ ಎಡಭಾಗದ ತಲೆಯ ಮೇಲಿದ್ದು, ಅದರ ಕೆಳಗಿನ ಮೂಳೆಗಳು ಮುರಿದಿದ್ದವು. 3 X 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ತರಚಿದ ಗಾಯವು ಎಡಕಣ್ಣು ಮತ್ತು ಎಡಕಿವಿಯ ಮಧ್ಯದಲ್ಲಿ ಇತ್ತು. ಎಡಗಣ್ಣಿನ ಮೇಲ್ಭಾಗ ಕಪ್ಪಾಗಿತ್ತು. ಎಡಭಾಗದ ಕತ್ತು ಹಾಗೂ ಬಲಭಾಗದ ಹೊಟ್ಟೆಯಲ್ಲಿ ಅಲ್ಲಲ್ಲಿ ಇರುವೆಗಳು ಕಚ್ಚಿರುವ ನಿಶಾನೆ ಇತ್ತು ಅದು ಮರಣ ಪೂರ್ವ ಆಗಿತ್ತು. ಮೇಲ್ಕಂಡ ಎಲ್ಲಾ ಗಾಯಗಳು ದೇಹದ ಹೊರಭಾಗದಲ್ಲಿದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

28. ಪ್ರಾಸಾಃ16 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಶವವನ್ನು ಕತ್ತರಿಸಿ ನೋಡಲಾಗಿ ತಲೆ ಬುರುಡೆ ಚರ್ಮದ ಒಳಭಾಗದಲ್ಲೆಲ್ಲಾ ನೀಲಿ ಗಟ್ಟಿದ ಗಾಯಗಳಿಂದ ಕೂಡಿತ್ತು. ತಲೆಯ ಬುರುಡೆಯ ಮೂಳೆಗಳು ಹಾಗೂ ತಲೆಯ ಕಳೆಗಿನ ಮೂಳೆಗಳೆಲ್ಲವೂ ಅನೇಕ ಮೂಳೆ ಮುರಿತದಿಂದ ಕೂಡಿತ್ತು. ಮೆದುಳಿನ ಪೊರೆಗಳು ಸುಸ್ಥಿತಿಯಲ್ಲಿತ್ತು. ಮೆದುಳು ಊತದಿಂದ ಕೂಡಿದ್ದು ಹಾಗೂ ಮೆದುಳಿನ ಎಲ್ಲಾ ಭಾಗಗಳು ರಕ್ತಸ್ರಾವದಿಂದ ಕೂಡಿರುವುದು ಕಂಡುಬಂತು. ಎದೆಗೂಡಿನ ಹೊರಭಾಗ ಹಾಗೂ ಪಕ್ಕೆಲುಬುಗಳು ಸುಸ್ಥಿತಿಯಲ್ಲಿದ್ದವು. ಎದೆಗೂಡಿನ ಎಲ್ಲಾ ಒಳ ಅಂಗಗಳು ಸುಸ್ಥಿತಿಯಲ್ಲಿದ್ದವು. ಹೊಟ್ಟೆಯ ಹೊರಭಾಗ ಸುಸ್ಥಿತಿಯಲ್ಲಿತ್ತು. ಜಠರದಲ್ಲಿ

220 ಎಂ.ಎಲ್ ನಷ್ಟು ಗಡುಸಾದ ದ್ರವದಿಂದ ಕೂಡಿದ್ದು ಹಾಗೂ ಮದ್ಯ ಸಾರದ ವಾಸನೆ ಇತ್ತು, ಪಿತ್ತಜನಕಾಂಗವು ದೊಡ್ಡದಾಗಿತ್ತು, ಉಳಿದಂತೆ ಹೊಟ್ಟೆಯಲ್ಲಿ ಅಂಗಾಂಗಗಳು ಸುಸ್ಥಿತಿಯಲ್ಲಿದ್ದವು. ಎರಡೂ ಮೂತ್ರ ಜನಕಾಂಗಗಳು ಸುಸ್ಥಿತಿಲ್ಲಿದ್ದು ಮೂತ್ರಕೋಶವು ಖಾಲಿ ಇತ್ತು ಹೊರಗಿನ ಮತ್ತು ಒಳಗಿನ ಸಂತಾನಾಭಿವೃದ್ಧಿ ಯಂತ್ರವು ಸುಸ್ಥಿತಿಯಲ್ಲಿತ್ತು. ಶವದ ಕುತ್ತಿಗೆಯನ್ನು ಕೊಯ್ದು ನೋಡಲಾಗಿ ಅದರ ಒಳಗಿನ ಎಲ್ಲಾ ಅಂಗಾಗಂಗಳು ಸುಸ್ಥಿತಿಯಲ್ಲಿದ್ದವು. ಮೃತ ದೇಹದಿಂದ ರಕ್ತದ ಮಾದರಿಯನ್ನು ಶೇಖರಿಸಿ ಮೊಹರು ಮಾಡಿ ಸಂಬಂದಪಟ್ಟ ಆರಕ್ಷಕರಿಗೆ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಯಿತು. ಮೃತ ದೇಹದಲ್ಲಿ ಕಂಡು ಬಂದಂತ ಎಲ್ಲಾ ಗಾಯಗಳು ಮರಣಪೂರ್ವ ಗಾಯಗಳಾಗಿದ್ದು , ಹಾಗೂ ಸದರಿ ಗಾಯಗಳ ಅವಧಿಯು ಮರಣದ ಸಮಯಕ್ಕೆ ತಾಜಾ ಗಾಯ ಆಗಿದ್ದವು ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

29. ಫ್ರಾ.ಸಾ.16 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿನಾಂಕ 19.02.2019 ರಂದು ತುರುವೇಕೆರೆ ಪೋಲಿಸ್ ಠಾಣೆಯ ಪಿ. ಐ ರವರು ಒಂದು ಮನವಿಯನ್ನು ಸಲ್ಲಿಸಿದ್ದು ಅದರಲ್ಲಿ ಮೃತ ಸುರೇಶ್ ರವರಿಗೆ ಉಂಟಾಗಿರುವ ಗಾಯಗಳು ಯಾವ ರೀತಿ ಆಗಿರುತ್ತದೆ ಎಂದು ಅಭಿಪ್ರಾಯ ಕೋರಿರುತ್ತಾರೆ. ಅದೇ ದಿನ ನನ್ನ ಅಭಿಪ್ರಾಯವನ್ನು ಮೃತ ವ್ಯಕ್ತಿಯ ಹೊರಗಾಯಗಳಾದ 1 ರಿಂದ 8 ಹಾಗೂ ಅದಕ್ಕೆ ಸಂಬಂದಪಟ್ಟ ಒಳಗಾಯಗಳು ಗಡುಸಾದ, ಮೊಂಡಾದ ಹಾಗೂ ಒರಟಾದ ಆಯುಧದಿಂದ ಆಗುವ ಸಾಧ್ಯತೆ ಇರುವುದಾಗಿ ಅಭಿಪ್ರಾಯ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

30. ಫ್ರಾ.ಸಾ.16 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿನಾಂಕ 03.05.2019 ರಂದು ತುರುವೇಕೆರೆಯ ವೃತ್ತ ನಿರೀಕ್ಷಕರು ಒಂದು ಮನವಿಯೊಂದಿಗೆ ಮೊಹರು ಮಾಡಿದ ಸ್ಥಿತಿಯಲ್ಲಿ ಒಂದು ಸೀಲ್ ಆದಂತಹ ಬಿಳಿಯ

ಚೀಲದಲ್ಲಿದ್ದಂತಹ ಆಯುಧವನ್ನು ಕಳುಹಿಸಿದ್ದು, ಆಯುಧವನ್ನು ಪರೀಕ್ಷೆ ಮಾಡಿ ಮೃತ ದೇಹದಲ್ಲಿ ಕಂಡುಬಂದಂತ ಗಾಯದ ಬಗ್ಗೆ ಅಭಿಪ್ರಾಯ ಕೋರಿರುತ್ತಾರೆ. ಮೊಹರನ್ನು ತೆಗೆದು ನೋಡಲಾಗಿ ಅದರಲ್ಲಿ 94.5 ಸೆಂ.ಮೀ. X 5 ಸೆಂಮಿ. X 2.5 ಸೆಂ.ಮಿ. ಅಳತೆಯ ಮರದ ರಿಪೀಸು ಆಗಿದ್ದು ಅದರ ಎರಡು ತುದಿಗಳು ಕುಯ್ದಿದ್ದವು. ಅದರ ಮೇಲ್ಭಾಗವು ಒರಟಾಗಿತ್ತು. ಮತ್ತು ಅದರ ಮೇಲೆ 6 ಮೊಳೆಗಳು ಇದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

31. ಫ್ರಾ.ಸಾ.16 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಸದರಿ ಅಭಿಪ್ರಾಯದಲ್ಲಿ ಮೃತ ದೇಹದ ಹೊರಭಾಗದಲ್ಲಿ ಇದ್ದಂತಹ 1 ರಿಂದ 8 ಗಾಯಗಳು ಹಾಗೂ ಒಳಗಿನ ಗಾಯಗಳು ಪರೀಕ್ಷೆ ಮಾಡಿದಂತಹ ಮರದ ರೀಪೀಸ್ ನಿಂದ ಆಗುವ ಸಾಧ್ಯತೆಗಳು ಇರುವುದಾಗಿ ಅಬಿಪ್ರಾಯ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

32. ಫ್ರಾ.ಸಾ.16 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ದಿಃ 28.01.2025 ರಂದು ವೃತ್ತ ನಿರೀಕ್ಷಕರು ತುರುವೇಕೆರೆ ರವರು ಮನವಿಯನ್ನು ಸಲ್ಲಿಸಿದ್ದು, ಅದರ ಜೊತೆಗೆ FSL ವರದಿಗಳನ್ನು ಸಲ್ಲಿಸಿದ್ದು, ಅಂತಿಮ ಅಭಿಪ್ರಾಯವನ್ನು ಕೋರಿರುತ್ತಾರೆ. ಅದರಂತೆ ದಿಃ 28.01.2025 ರಂದು ಶವ ಪರೀಕ್ಷಾ ವರದಿಯನ್ನು ಹಾಗೂ FSL ವರದಿಗಳಾದ ನಿ.ಪಿ–20 ಹಾಗೂ 25 ಅನ್ನು ಪರಿಶೀಲಿಸಿ ಮೃತ ವ್ಯಕ್ತಿಗೆ ತಲೆಗೆ ಆದಂತಹ ಗಾಯಗಳ ಪರಿಣಾಮವಾಗಿ ಸಾವು ಸಂಭವಿಸಿರುವುದಾಗಿ ಅಭಿಪ್ರಾಯ ಪಟ್ಟು ಅಂತಿಮ ವರದಿಯನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

33. ಚಾ.ಸಾ.23 ಸಾಯಬಣ್ಣ ನಂದಗಿರಿ ರವರನ್ನು ಫ್ರಾಸಾ.17 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿಃ17.02.2019 ರಂದು ಠಾಣಾ ಯು.ಡಿ.ಆರ್ ನಂ.2/2019 ರಲ್ಲಿ ಕಂಡ ಮೃತ ಸುರೇಶ್ ರವರ ಶವದ ಬೆಂಗಾವಲಿಗೆ ನೇಮಕ ಮಾಡಿದ್ದು, ನೇಮಕದಂತೆ ಮೃತ ದೇಹವನ್ನು ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಪಿ ಎಂ ಮಾಡಿಸಿ ಮೃತ ದೇಹದ ಮೇಲೆ ಇದ್ದ ವಸ್ತುಗಳನ್ನು ವೈದ್ಯರು ಶೇಖರಿಸಿ ನೀಡಿದ್ದು, ಸದರಿ ವಸ್ತುಗಳನ್ನು ಅದೇ ದಿನ ಸಂಜೆ ಪಿ ಎಸ್ ಐ ರವರ ಮುಂದೆ ಹಾಜರುಪಡಿಸಿದ್ದು, ಪಿ ಎಸ್ ಐ ರವರು ವೈದ್ಯರು ಶೇಖರಿಸಿಕೊಟ್ಟ ರಕ್ತದ ಕಲೆ ಆಗಿರುವ, ಅಲ್ಲಲ್ಲಿ ಹರಿದಿರುವ ನೀಲಿ ಜರ್ಕಿನ್, ಅಲ್ಲಲ್ಲಿ ಹರಿದಿರುವ ಹಾಗೂ ಅಲ್ಲಲ್ಲಿ ರಕ್ತದ ಕಲೆ ಆಗಿರುವ ಬಿಳಿ ಗೀರುಗಳು ಇರುವ ಅರ್ಧ ತೋಳಿನ ಅಂಗಿ, ಅಲ್ಲಲ್ಲಿ ಹರಿದಿರುವ ರಕ್ತದ ಕಲೆ ಆಗಿರುವ ಮಾಸಲು ಬಣ್ಣದ ಪ್ಯಾಂಟ್, ಅಲ್ಲಲ್ಲಿ ಹರಿದಿರುವ ಖಾಕಿ ಬಣ್ಣದ ನಿಕ್ಕರ್, ಇವುಗಳನ್ನು ಪಿ ಎಸ್ ಐ ರಾಜು ರವರು ಪಂಚರಾದ ಅಶೋಕ್ ಮತ್ತು ರಾಜೇಶ್ ಟಿ.ಆರ್ ರವರ ಸಮಕ್ಷಮ ತೋರಿಸಿದ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

34. ಚಾ.ಸಾ.14 ರಾಮು ರವರನ್ನು ಫ್ರಾಸಾ.19 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ನನ್ನ ತಾಯಿಯೊಂದಿಗೆ ಆಸ್ಪತ್ರೆಗೆ ಹೋದಾಗ ಪೊಲೀಸರು ನಿ.ಪಿ-17 ಮತ್ತು 18 ದಾಖಲಾತಿಗೆ ತುಮಕೂರು ಸರ್ಕಾರಿ ಆಸ್ಪತ್ರೆಯಲ್ಲಿ ಪಿ.ಎಂ ಮಾಡುವ ಕಾಲಕ್ಕೆ ಸಹಿ ಪಡೆದುಕೊಂಡಿರುತ್ತಾರೆ. ಸುರೇಶ್ ರವರ ಮೃತ ದೇಹವನ್ನು ನೋಡಿದಾಗ ಅವರ ಮೈಮೇಲೆ ಜರ್ಕೀನ್, ಶರ್ಟ್ ಹಾಗೂ ಅಂಡರ್ ವಿಯರ್ ಇರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

35. ಚಾ.ಸಾ.24 ಮಂಜುನಾಥ.ಎಸ್ ರವರನ್ನು ಫ್ರಾಸಾಃ 20 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿಃ 01.03.2019 ರಂದು ತುರುವೇಕೆರೆ ಪೋಲಿಸ್ ಠಾಣೆ ಮೊಕದ್ದಮೆ ಸಂಖ್ಯೆ 14/2019 ಕಲಂ

302,201 ಐ.ಪಿ.ಸಿ ಕೇಸಿನಲ್ಲಿ ಆರೋಪಿಯ ಪತ್ತೆ ಬಗ್ಗೆ ನೇಮಕ ಮಾಡಿರುತ್ತಾರೆ. ಅದರಂತೆ ನಾನು ಮತ್ತು ಚಾಸಾ–25 ರವರು ಇಬ್ಬರು ನೊಣವಿನಕೆರೆ, ಹಾಲ್ಕೂರು, ಕೆ–ಮಾವಿನಹಳ್ಳಿ ಹಾಗೂ ತಂಡಗ ಗ್ರಾಮಗಳಿಗೆ ಹೋಗಿ ಭಾತ್ಮೀದಾರರನ್ನು ವಿಚಾರ ಮಾಡಿದ್ದು, ತಂಡಗ ಗ್ರಾಮದಲ್ಲಿ ಗೋವಿಂದರಾಜು @ ಕತ್ತೆರಾಜು ಬಿನ್ ಲೇಟ್ ತಿಮ್ಮಯ್ಯ ರವರು ತಂಡಗ ಗ್ರಾಮದ ಅವರ ಮನೆಯ ಮುಂದೆ ಇದ್ದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಬೆಳಗ್ಗೆ 7.00 ಗಂಟೆಗೆ ಸಿಕ್ಕ ಗೋವಿಂದರಾಜು ರವರವನ್ನು ವಿಚಾರಣೆ ಮಾಡಲಾಗಿ, ಅವರು ಗೋವಿಂದರಾಜು ಎಂದು ಒಪ್ಪಿಕೊಂಡಿದ್ದು ನಂತರ ಆತನನ್ನು ತುರುವೇಕೆರೆ ವೃತ್ತ ನಿರೀಕ್ಷಕರ ಕಛೇರಿಗೆ ಕರೆದುಕೊಂಡು ಹೋಗಿ ತನಿಖಾಧಿಕಾರಿಗಳಾದ ಸಲೀಂ ರವರ ಮುಂದೆ ಬೆಳಗ್ಗೆ 8.00 ಗಂಟೆಯ ಸಮಯದಲ್ಲಿ ಹಾಜರುಪಡಿಸಿ, ವರದಿಯನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

36. ಚಾ.ಸಾ.29 ಶ್ರೀಮತಿ. ಉಶಾ ನಂದಿನಿ ರವರನ್ನು ಫ್ರಾಸಾಃ 22 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, On 13.03.2019 our office has received 1 sealed article from Channakeshavaiah.H.C.,in Crime No.14/2019 of Turuvekere P.S. for offence punishable U/sec.302,201 of IPC. The 1 article received were sealed and tallied with sample seal and were intact. On examination having opened sealed article No. 1) Blood sample of Suresh, a/a 48 years, Male. Vide PMR No.104/2019, dated: 17.02.2019. Which was bearing I.O marking 1 ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

37. ಫ್ರಾಸಾಃ 22 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, Blood sample were subjected to steamed distillation and the distillate was collected. Distillate from sampling method 1 was analyzed for alcohols by colour test and Gas chromatography ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

38. ಫ್ರಾಸಾಃ 22 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, Colour tests and Gas Chromatography methods have responded for presence of Ethyl alcohol in article No.1, quantum of Ethyl Alcohol=285.5Mg/100Ml of blood. with respect to the same I have issue the report. After examine the article No.1 blood it was transferred to biology section for further analysis as per request of I.O., ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

39. ಚಾ.ಸಾ.27 ಜಿ.ಪಿ ರಾಜ್ ರವರನ್ನು ಫ್ರಾಸಾ.23 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿಃ 17.02.2019 ರಂದು ಬೆಳಗ್ಗೆ 11.15 ಗಂಟೆಗೆ ಠಾಣೆಯಲ್ಲಿ ಇರುವಾಗ ಫಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣೆಯ UDR No.2/2019 ಕಲಂ 174(3) of Cr.P.C., ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ವರದಿಯನ್ನು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

40. ಫ್ರಾಸಾಃ 23 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ನಂತರ ತನಿಖೆಯನ್ನು ಮುಂದುವರೆಸಿ, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-7 ರಿಂದ 9 ರವರಿಗೆ ನೋಟಿಸ್ ನೀಡಿ ಪಂಚರಾಗಿ ಸಹಕರಿಸಲು ಪಂಚರ ಸಮಕ್ಷಮ ಸಾಕ್ಷಿದಾರರಾದ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ, ಸ್ಥಳ ಪಂಚನಾಮೆ ಹಾಗೂ ಅಮಾನತ್ತು ಪಂಚನಾಮೆಯನ್ನು 12.00-1.00 ಗಂಟೆಯವರೆಗೂ ಜರುಗಿಸಿರುತ್ತಾರೆ. ಸದರಿ ಸ್ಥಳ ಪಂಚನಾಮೆಯ ಸಮಯದಲ್ಲಿ ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತವಲ್ಲದ ಮಣ್ಣನ್ನು ಪ್ಲಾಸ್ಟಿಕ್ ಡಬ್ಬಿಯಲ್ಲಿ ಶೇಕರಿಸಿ, ಬಿಳಿ ಬಟ್ಟೆಯಿಂದ ಪ್ರತ್ಯೇಕವಾಗಿ ಪ್ಯಾಕ್ ಮಾಡಿ 'ಹೆಚ್' ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತಾರೆ. ನಂತರ ಅದನ್ನು ಠಾಣೆಯ PF No.10/2019 ರಲ್ಲಿ ನಮೂದಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

41. ಫ್ರಾಸಾಃ 23 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಅದೇ ದಿನ ತನಿಖೆಯನ್ನು ಮುಂದುವರೆಸಿ ತುಮಕೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮಧ್ಯಾಹ್ನ 2.15 ರಿಂದ 4.45 ಗಂಟೆಯ ವರೆಗೂ ಪಂಚರಾದ ಮಂಜುನಾಥ, ಚಾಸಾ-14 ಹಾಗೂ ಚಾಸಾ-15 ರವರಿಗೆ ನೋಟಿಸ್ ಜಾರಿ ಮಾಡಿ ಅವರ ಸಮಕ್ಷಮ ಶವ ತನಿಖೆಯನ್ನು ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

42. ಫ್ರಾಸಾಃ 23 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಅದೇ ದಿನ ಶವ ತನಿಖಾ ಕಾಲಕ್ಕೆ ಚಾಸಾ-2, ಚಾಸಾ-10 ಹಾಗೂ ಚಾಸಾ-17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ನಂತರ ಠಾಣೆಗೆ ಹಾಜರಾಗಿ ಅದೇ ದಿನ ಸಂಜೆ 7.15 ರಿಂದ 8.00 ಗಂಟೆಯವರೆಗೂ ಶವದ ಮೇಲೆ ಇದ್ದ ವಸ್ತುಗಳನ್ನು ಪಿ.ಸಿ-ಸಾಹೇಬಣ್ಣರವರು ತಂದು ಹಾಜರುಪಡಿಸಿದ್ದನ್ನು ಅಮಾನತ್ತು ಪಂಚನಾಮೆಯ

ಮುಖಾಂತರ ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಅಮಾನತ್ತು ಪಡಿಸಿಕೊಂಡು ಠಾಣಾ PF No.11/2019 ರಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

43. ಫ್ರಾಸಾಃ 23 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ19.02.2019 ರಂದು ಮೃತನ ಶವ ಪರೀಕ್ಷಾ ವರದಿಯನ್ನು ಪಡೆದು, ಅದೇ ದಿನ ವೈದ್ಯಾಧಿಕಾರಿಗಳಿಗೆ ಶವದ ಗಾಯಗಳ ಬಗ್ಗೆ ಅಭಿಪ್ರಾಯವನ್ನು ಕೋರಿ ಮನವಿಯನ್ನು ನೀಡಿದ್ದು, ವೈದ್ಯರು ತಮ್ಮ ಅಭಿಪ್ರಾಯ ವರದಿಯನ್ನು ದಿಃ 19.02.2019 ರಂದು ನೀಡಿರುತ್ತಾರೆ ಹಾಗೂ ಅದೇ ದಿನ ವೈಧ್ಯರಿಂದ ಅಂತಿಮ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

44. ಫ್ರಾಸಾಃ 23 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಅದೇ ದಿನ ರಾತ್ರಿ 8.00 ಗಂಟೆಗೆ ಠಾಣೆಗ ಹಾಜರಾಗಿ ವೈಧ್ಯರ ಅಭಿಪ್ರಾಯದ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 14/2019 ಕಲಂ 302,201 ಐ.ಪಿ.ಸಿ ರಿತ್ಯಾ ಪ್ರಕರಣವನ್ನು ಸ್ವಯಂ ಪ್ರೇರಿತ ದೂರಿನ ಮೇಲೆ ದಾಖಲಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

45. ಫ್ರಾಸಾಃ 23 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಸದರಿ ಪ್ರವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತಾರೆ ಹಾಗೂ ಸದರಿ ಪ್ರಕರಣವು ಘೋರ ಪ್ರಕರಣವಾದ ಕಾರಣ ತನಿಖೆಯನ್ನು ಬಾಸಾ–28 ರವರಿಗೆ ವಹಿಸಿಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

46. ಚಾ.ಸಾ.28 ಮೊಹಮ್ಮದ್ ಸಲೀಂ.ಬಿ ರವರನ್ನು ಫ್ರಾಸಾಃ 24 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿಃ 20.02.2019 ರಂದು ಈ ಪ್ರಕರಣದ ಕಡತವನ್ನು ತುರುವೇಕರೆ ಠಾಣಾ ಪಿ.ಎಸ್.ಐ ಚಾಸಾ–27 ರವರಿಂದ ಪಡೆದುಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಆರೋಪಿ ಪತ್ತೆಗಾಗಿ ಠಾಣಾ ಸಿಬ್ಬಂದಿಯೊಳಗೆ ಬೇರೆ ಬೇರೆ ತಂಡ ಮಾಡಿ ಪ್ರಯತ್ನಿಸುತ್ತಿದ್ದು, ಅದರಂತೆ ದಿಃ 01.03.2019 ರಂದು ಆರೋಪಿ ಪತ್ತೆಗಾಗಿ ನೇಮವಾಗಿದ್ದ ಸಿಬ್ಬಂದಿಯವರಾದ ಸಿ.ಪಿ.ಸಿ–269 ಹಾಗೂ ಸಿ.ಪಿ.ಸಿ–111 ರವರು ಈ ಪ್ರಕರಣದಲ್ಲಿ ಗುಮಾನಿ ಆಸಾಮಿಯಾದ ಗೋವಿಂದರಾಜು @ ಕತ್ತೆರಾಜು @ ರಾಜ ರವರನ್ನು ಬೆಳಗ್ಗೆ 7.00 ಗಂಟೆಗೆ ತಂಡಗ ಗ್ರಾಮದಲ್ಲಿ ವಶಕ್ಕೆ ಪಡೆದು ಬೆಳಗ್ಗೆ 8.00 ಗಂಟೆಗೆ ನನ್ನ ಮುಂದೆ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

47. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಗುಮಾನಿ ಆಸಾಮಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಆರೋಪಿಯು ತಾನೇ ಕೊಲೆ ಮಾಡಿದ್ದು ಎಂದು ಒಪ್ಪಿಕೊಂಡಿದ್ದು, ಅದರಂತೆ ಆರೋಪಿಯನ್ನು ದಸ್ತಗಿರಿ ನಿಯಮವನ್ನು ಜರುಗಿಸಿ, ಅಭಿರಕ್ಷೆಯ ನಡವಳಿಯನ್ನು ಅನುಸರಿಸಿ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದಿದ್ದು, ಆರೋಪಿತನು ಸ್ವ ಇಚ್ಛಾ ಹೇಳಿಕೆಯಲ್ಲಿ ನನ್ನ ಜೊತೆಯಲ್ಲಿ ಬಂದರೆ ಸುರೇಶ್ ನಿಗೆ ಹೊಡೆದು ಕೊಲೆ ಮಾಡಲು ಉಪಯೋಗಿಸಿ ಎಸೆದಿರುವ ರೀಪೀಸ್ ದೊಣ್ಣೆಯನ್ನು ಹಾಗೂ ರಕ್ತವಾಗಿರುವ ಅಂಗಿ ಮತ್ತು ಚಡ್ಡಿಯನ್ನು ಹಾಜರು ಪಡಿಸುತ್ತೇನೆ ಎಂದು ಸ್ವಇಚ್ಛಾ ಹೇಳಿಕೆಯನ್ನು ನೀಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

48. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಆರೋಪಿತನು ಹೇಳಿದಂತೆ ಮರದ ರೀಪೀಸ್ ಅನ್ನು ಹಾಗೂ ಬಟ್ಟೆಗಳನ್ನು ವಶಪಡಿಸಿಕೊಳ್ಳಲು ಪಂಚನಾಮೆಯನ್ನು ಜರುಗಿಸುವ ಸಂಬಂಧ ತಂಡಗ ಗ್ರಾಮದ ಪಟ್ಟಣ ಪಂಚಾಯತಿ ಯವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ಪಂಚರಾದ ಚಾಸಾ-11 ಮತ್ತು 12 ರವರನ್ನು ನೇಮಕ ಮಾಡಿರುತ್ತಾರೆ. ಸದರಿ ಚಾಸಾ-11 ಮತ್ತು 12 ರವರನ್ನು ಬೆಳಗ್ಗೆ 11.30 ಗಂಟೆಗೆ ಬರಮಾಡಿಕೊಂಡಿರುತ್ತಾರೆ. ಪಂಚರಿಗೆ ಪ್ರಕರಣದ ಬಗ್ಗೆ ಸಂಕ್ಷಿಪ್ತ ವಿವರಗಳನ್ನು ತಿಳಿಸಿ, ವಶದಲ್ಲಿದ್ದ ಆರೋಪಿಯನ್ನು ಪರಿಚಯಿಸಿ, ಆರೋಪಿ ತೋರಿಸಿದ ಸ್ಥಳದಲ್ಲಿ ಹೋಗಿ ಪಂಚನಾಮೆಯನ್ನು ಜರುಗಿಸಲು ಸಹಕರಿಸಬೇಕೆಂದು ಕೋರಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

49. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಅದರಂತೆ ಪಂಚರು ಒಪ್ಪಿದ್ದು ನಾನು ಮತ್ತು ಪಂಚರು ಹಾಗೂ ಆರೋಪಿ ಮತ್ತು ಸಿಬ್ಬಂದಿಯೊಂದಿಗೆ ಇಲಾಖ ವಾಹನವಾದ KA-06-G-455 ರಲ್ಲಿ 12.15 ಗಂಟೆಗೆ ಕಛೇರಿಯನ್ನು ಬಿಟ್ಟು 12.50 ಗಂಟೆಗೆ ತಂಡಗ ಗ್ರಾಮಕ್ಕೆ ತಲುಪಿದ್ದು, ಗ್ರಾಮದ ಪ್ರವೇಶದಲ್ಲಿಯೇ ನಮ್ಮ ವಾಹನವನ್ನು ನಿಲ್ಲಿಸಿ ಆರೋಪಿಯವರನ್ನು ಕೃತ್ಯಕ್ಕೆ ಉಪಯೋಗಿಸಿದ ರೀಫಿಸ್ ಮತ್ತು ರಕ್ತಸಿಕ್ತ ಬಟ್ಟೆ ಇರುವ ಸ್ಥಳಕ್ಕೆ ಕರೆದುಕೊಂಡು ಹೋಗಲು ತಿಳಿಸಿದ್ದು, ಅದರಂತೆ ಆರೋಪಿಯು ಮುಂದೆ ಮುಂದೆ ಹೋಗುತ್ತಿದ್ದು, ನಾವು, ಪಂಚರು ಮತ್ತು ಸಿಬ್ಬಂದಿ ಆತನನ್ನು ಹಿಂಬಾಲಿಸಿದ್ದು ಆರೋಪಿಯು ಗ್ರಾಮದ ರಾಮ ಮಂದಿರದ ಪಕ್ಕದಲ್ಲಿರುವ ರೋಜ ಬಳ್ಳಿಯ ಪೊದೆಯಲ್ಲಿ ಅವಿತು ಇಟ್ಟಿದ್ದ ಒಂದು ಮರದ ರೀಪೀಸ್ ಅನ್ನು ಹೊರ ತೆಗೆದು ತೋರಿಸಿದ್ದು, ಅದನ್ನು ಪರಿಶೀಲಿಸಿ ನೋಡಲಾಗಿ ಸುಮಾರು 3 ಅಡಿಯ ಒಳಹಿಡಿ ಗಾತ್ರದ ಮರದ ರೀಫಿಸ್ ಆಗಿದ್ದು ಅದಕ್ಕೆ ಒಂದು ಕಡೆ ರಕ್ತವು ಅಂಟಿರುವ ಕುರುಹುಗಳು ಇದ್ದು, ಅದರಲ್ಲಿ 6 ಕಬ್ಬಿಣ ಮೊಳೆಗಳನ್ನು ಹೊಡೆದಿರುತ್ತದೆ. ಅದನ್ನು ಮುಂದಿನ ತನಿಖೆ ಹಾಗೂ ವಿಧಿ ವಿಜ್ಞಾನ ಪ್ರಯೋಗ ಶಾಲೆಗೆ ಪರೀಕ್ಷೆಗಾಗಿ ಕಳುಹಿಸಲು ಒಂದು ಬಿಳಿ ಬಟ್ಟೆ

ಚೀಲದಲ್ಲಿ ಹಾಕಿ ಭದ್ರ ಪಡಿಸಿ ಇಂಗ್ಲೀಷ್ ನ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

50. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ತದನಂತರ ಆರೋಪಿಯು ತನ್ನ ಮನೆಯ ಕಡೆ ಕರೆದುಕೊಂಡು ಹೋಗಿ ಮನೆಯ ಮುಂದೆ ಇರುವ ಪ್ಲಾಸ್ಟಿಕ್ ಡ್ರಮ್ ನ ಪಕ್ಕದಲ್ಲಿ ಬಚ್ಚಿಟ್ಟಿದ್ದ ರಕ್ತಸಿಕ್ತ ಬಟ್ಟೆಗಳನ್ನು ಹೊರತೆಗೆದು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಲಾಗಿ ಒಂದು ಕಪ್ಪು ಬಣ್ಣದ ಬಿಳಿ ಗೆರೆಗಳುಳ್ಳ ಅರ್ಧ ತೋಳಿನ ಶರ್ಟ್ ಆಗಿದ್ದು ಅದಕ್ಕೆ ಮುಂಭಾಗ ಹಾಗೂ ಬಲಭಾಗ ಅಲ್ಲಲ್ಲಿ ರಕ್ತದ ಕಲೆಗಳಿದ್ದು, ಅದನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಶರ್ಟನ್ನು ಆರೋಪಿಯು ಕೃತ್ಯವೆಸಗುವ ಸಮಯದಲ್ಲಿ ಧರಿಸಿದ್ದು ಅದಕ್ಕೆ ರಕ್ತವಾಗಿರುವುದರಿಂದ ಬಚ್ಚಿಟ್ಟಿದ್ದಾಗಿ ಹೇಳಿರುತ್ತಾರೆ. ಅದರಂತೆ ಕೃತ್ಯ ಎಸಗುವ ಸಮಯದಲ್ಲಿ ತಾನು ಧರಿಸಿದ್ದ ಒಂದು ಡಿಮ್ ಗ್ರೇ ಬಣ್ಣದ ಪ್ಯಾಂಟ್ ಪೀಸ್ ನ ನಿಕ್ಕರ್ ಆಗಿದ್ದು ಅದಕ್ಕೂ ಸಹಃ ಮುಂಭಾಗದ ರಕ್ತದ ಕುರುಹುಗಳಿದ್ದು, ಇವೆರಡನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ವಸ್ತುಗಳನ್ನು ಠಾಣಾ ಪಿ.ಎಫ್ ನಂ.16/2019 ರಲ್ಲಿ ನೊಂದಾಯಿಸಿಕೊಂಡು, ಸದರಿ ವಸ್ತುಗಳನ್ನು FSL ಗೆ ಕಳುಹಿಸಲು ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

51. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ನಂತರ ಆರೋಪಿ ಗೋವಿಂದರಾಜು ರವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸೂಕ್ತ ಬೆಂಗಾವಲಿನಲ್ಲಿ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಘನ ನ್ಯಾಯಾಲಯವೂ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತದೆ. ನಂತರ ಈ ಪ್ರಕರಣದ ಮೃತನ ಹೆಂಡತಿಯಾದ ಶ್ರೀಮತಿ ಸುಮಾ ಹಾಗೂ ಮಗನಾದ ಗಂಜೇಂದ್ರ ಹಾಗೂ

ಹೊನ್ನಪ್ಪ ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

52. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 02.03.2019 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಕೃತ್ಯ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ತುರುವೇಕೆರೆ ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿರುತ್ತಾರೆ. ನಂತರ ದಿಃ 09.03.2019 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ವಸ್ತುಗಳನ್ನು ಠಾಣಾ ಪಿ.ಸಿ–1041 ರವರ ಮುಖಾಂತರ ದಾವಣಗೆರೆ, FSL ಗೆ ಕಳುಹಿಸಿ ಕೊಟ್ಟಿರುತ್ತಾರೆ ಹಾಗೂ ಠಾಣಾ ಸಿ.ಪಿ.ಸಿ–1057 ರವರು ತಂದು ಹಾಜರುಪಡಿಸಿದ ಮೃತರ ಬಾಬ್ತು ರಕ್ತವನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 25/2019 ರಲ್ಲಿ ನಮೂದಿಸಿ ಘನ ನ್ಯಾಯಾಲಯದ ಆದೇಶದಂತೆ ಅನುಮತಿ ಪಡೆದು ಸದರಿ ವಸ್ತುವನ್ನು ಠಾಣಾ ಹೆಚ್.ಸಿ–42 ರವರ ಮುಖಾಂತರ FSL, ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

53. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 15.03.2019 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಚಾಸಾ–3 ರಿಂದ 6 ಹಾಗೂ ಚಾಸಾ–26 ರವರುಗಳ ವಿಚಾರಣೆ ಮಾಡಿ ವಿವರವಾದ ಹೇಳಿಕೆಗಳನ್ನು ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

54. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 02.04.2019 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಆರೋಪಿ ಗೋವಿಂದರಾಜು ರವರ ಮೊಬೈಲ್ ಸಂಖ್ಯೇಃ 9880067101 ಹಾಗೂ ಮೃತ ಸುರೇಶ್ ರವರ ಮೊಬೈಲ್ ಸಂಖ್ಯೇಃ9632056545 ರ CAF ಮತ್ತು CDR ಅನ್ನು ಏರ್ಟೇಲ್ ನೋಡಲ್ ಅಧಿಕಾರಿಗಳಿಂದ ಪಡೆದುಕೊಂಡಿರುತ್ತಾರೆ. ಸದರಿ ಮನವಿ ಪತ್ರವನ್ನು ಸಲ್ಲಿಸಿದ್ದು, ಸದರಿ ಏರ್ಟೇಲ್ ನವರು 9880067101 ಗೆ ಸಂಬಂಧಿಸಿದಂತೆ CAF ಡಿಟೇಲ್ಸ್ ಹಾಗೂ ದಿಃ 14.02.2019 ರಿಂದ ದಿಃ 18.02.2019 ರವರೆಗೆ CDR ನ ಡಿಟೇಲ್ಸ್ ಅನ್ನು ನೀಡಿರುತ್ತಾರೆ ಹಾಗೂ 9632056545 ನಂಬರ್ ಗೆ ಸಂಬಂಧಿಸಿದಂತೆ CAF ಡಿಟೇಲ್ಸ್ ಹಾಗೂ ದಿಃ 14.02.2019 ರಿಂದ ದಿಃ 18.02.2019 ರವರೆಗೆ CDR ನ ಡಿಟೇಲ್ಸ್ ಅನ್ನು ನೀಡಿರುತ್ತಾರೆ ಹಾಗೂ ಸದರಿ ದಾಖಲಾತಿಗಳನ್ನು ನೀಡಿರುವ ಸಂಬಂಧ 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

55. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 05.04.2019 ರಂದು ಕೃತ್ಯ ನಡೆದ ಸ್ಥಳವಾದ ಶ್ರೀರಾಮ ಮಂದಿರ, ತಂಡಗ ಗ್ರಾಮದ ದಾಖಲಾತಿಗಳ್ನು ನೀಡಲು ಪಂಚಯಾತಿ ಅಭಿವೃದ್ದಿ ಅಧಿಕಾರಿಯವರಿಗೆ ಮನವಿಯನ್ನು ಸಲ್ಲಿಸಿ ಖಾತ ಎಕ್ಸ್ ಟ್ರಾಕ್ಟ್ ಅನ್ನು ಪಡೆದುಕೊಂಡಿರುತ್ತಾರೆ. ಕೃತ್ಯ ನಡೆದ ಸಮಯದಲ್ಲಿ ಕೃತ್ಯ ನಡೆದ ಜಾಗದಲ್ಲಿ ವಿದ್ಯುತ್ ಸರಬರಾಜು ನೀಡಿರುವ ಬಗ್ಗೆ ಬೆಸ್ಕಾಂ ತುರುವೇಕೆರೆ ರವರಿಗೆ ಮನವಿಯನ್ನು ಸಲ್ಲಿಸಿ ವರದಿಯನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

56. ಫ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 01.05.2019 ರಂದು ತನಿಖೆಯನ್ನು ಮುಂದುವರೆಸಿ ಪ್ರಕರಣದಲ್ಲಿ ಈಗಾಗಲೇ RFSL ದಾವಣಗೆರೆ ಗೆ ಕಳುಹಿಸಿದ 9 ವಸ್ತುಗಳನ್ನು ಮತ್ತು ವರದಿಯನ್ನು ಠಾಣಾ ಸಿ.ಪಿ.ಸಿ-111

ರವರ ಮುಖಾಂತರ ಕಳುಹಿಸಿಕೊಟ್ಟಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿ ಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

57. ಪ್ರಾ.ಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ನಂತರ ಕೃತ್ಯಕ್ಕೆ ಬಳಸಿದ ರೀಫಿಸ್ ದೊಣ್ಣೆಯನ್ನು ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರ ಬಳಿ ಪಿ.ಸಿ–1057 ರ ಮುಖಾಂತರ ಕಳುಹಿಸಿಕೊಟ್ಟಿರುತ್ತಾರೆ. ಸದರಿ ರೀಫಿಸ್ ದೊಣ್ಣೆಯಿಂದ ವ್ಯಕ್ತಿಗೆ ಹೊಡೆದರೆ ವ್ಯಕ್ತಿಯು ಸಾಯುವ ಸಂಭವವಿರುತ್ತದೆ ಎಂದು ವೈದ್ಯರ ಅಭಿಪ್ರಾಯವನ್ನು ಕೇಳಿರುತ್ತಾರೆ. ದಿಃ 03.05.2019 ರಂದು ಸದರಿ ವೈದ್ಯರಾದ ರುದ್ರಮೂರ್ತಿಯವರು ನೀಡಿರುವ ಅಭಿಪ್ರಾಯದಲ್ಲಿ ಮೃತರಿಗೆ ಆಗಿರುವ 1 ರಿಂದ 8 ಹೊರಗಿನ ಮತ್ತು ಒಳಗಿನ ಗಾಯಗಳು ಈ ಮರದ ರೀಫಿಸ್ ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

58. ಪ್ರಾ.ಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 09.05.2019 ರಂದು ತನಿಖೆಯನ್ನು ಮುಂದುವರೆಸಿ ಈ ಪ್ರಕರಣದಲ್ಲಿ ಮೃತ ಸುರೇಶ್ ರವರಿಗೂ ಹಾಗೂ ಆರೋಪಿಯಾದ ಗೋವಿಂದರಾಜುರವರಿಗೆ ಈ ಹಿಂದೆ ದಿಃ 29.09.2013 ರಂದು ತಂಡಗ ಗ್ರಾಮದ ಬೇಕರಿ ಬಳಿ ಗಲಾಟೆಯಾಗಿದ್ದು, ಆ ಸಂದರ್ಭದಲ್ಲಿ ಮೃತ ಸುರೇಶ್ ರವರಿಗೆ ಗಾಯವಾಗಿದ್ದು, ಅವರು ದಿಃ 28.09.2013 ರಂದು ತುರುವೇಕೆರೆ ಠಾಣೆಗೆ ಹಾಜರಾಗಿ ದೂರು ನೀಡಿದ್ದು, ಸದರಿ ಪ್ರಕರಣ ಸಂಖ್ಯೆಃ 198/2013 ರಲ್ಲಿ ಕಲಂ 504,324 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿದ್ದು ದಿಃ 18.11.2013 ರಂದು ಠಾಣಾ ಅಧಿಕಾರಿಗಳು ಘನ ನ್ಯಾಯಾಲಯಕ್ಕೆ ಆರೋಪಿ ಗೋವಿಂದರಾಜು ರವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

59. ಪ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ದಿಃ 31.10.2014 ರಂದು ಈ ಪ್ರಕರಣದಲ್ಲಿ ಆರೋಪಿತನು ಘನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ ತುರುವೇಕೆರೆ ನ್ಯಾಯಾಲಯದ ಮುಂದೆ ತಪ್ಪೊಪ್ಪಿಕೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು 500/- ದಂಡ ವಿಧಿಸಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

60. ಪ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಅದೇ ದಿನ ಸದರಿ ಪ್ರಕರಣದಲ್ಲಿ ಇಲ್ಲಿಯವರೆಗೂ ನಡೆದ ತನಿಖೆ ಹಾಗೂ ಸಾಕ್ಷಿದಾರರ ಹೇಳಿಕೆ ಹಾಗೂ FSL ವರದಿಗಳಿಂದ ಈ ಪ್ರಕರಣದಲ್ಲಿ ಆರೋಪಿತನಾದ ಗೋವಿಂದರಾಜ @ ಕತ್ತೆರಾಜು ರವರೇ ಕೃತ್ಯ ಎಸಗಿ ಸಾಕ್ಷಿಯನ್ನು ನಾಶ ಪಡಿಸಿದ್ದು ಸಾಭೀತಾಗಿದ್ದು, ಆರೋಪಿ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಮೇಲಾಧಿಕಾರಿಗಳ ಪರಿಶೀಲನೆಯ ನಂತರ ಸಲ್ಲಿಸಿಕೊಂಡಿರುತ್ತಾರೆ ಹಾಗೂ ಈ ಪ್ರಕರಣದಲ್ಲಿ ತನಿಖಾ ಕಾಲದಲ್ಲಿ ತೆಗೆದ ಪೋಟೋಗಳ ಬಗ್ಗೆ 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

61. ಪ್ರಾಸಾಃ 24 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮುಂದುವರೆದು, ಈ ಪ್ರಕರಣದಲ್ಲಿ ಬೆಂಗಳೂರು ಮಡಿವಾಳ ಪ್ರಯೋಗಾಲಯದಿಂದ ಮೃತನ ರಕ್ತದ ಪರೀಕ್ಷೆಯ ವರದಿ ಬರಲು ಬಾಕಿ ಇದ್ದು, ಅದಕ್ಕೆ ಸಂಬಂಧಿಸಿದಂತೆ ಅನುಮತಿಯನ್ನು ಕೋರಿ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

62. ಚಾ.ಸಾ.32 ಡಾ. ಲಿಂಗೇಗೌಡ.ಎನ್.ಎಲ್ ರವರನ್ನು ಪ್ರಾಸಾಃ 25 ಎಂದು ವಿಚಾರಣೆಮಾಡಿಕೊಂಡು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ, On 11.03.2019 our office has received 9 sealed articles from one Nagaraju P.C-1041 in Crime No. 14/2019 of Turuvekere P.S. for offence punishable U/sec.201,302 of IPC. The 9 articles received were sealed and tallied with sample seal and were intact. I have opened 9 sealed articles, Blood stained mud, Sample Mud, One Jerkin,One Shirt, One Pant, One Nicker, One wooden re-piece, One shirt, One Nicker ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

63. ಪ್ರಾಸಾಃ 25 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, Observations and test conducted for Blood Stains: Scrapings/ mud sample/cuttings from the suspected areas were tested for blood by presumptive tests namely, Benzidine/phenolthaline/leuko malachite-green tests. The presence of blood stains were further confirmed by conducting Takayama test/ microscopic test. The extent of the stains, their size and location were also noted. The results of the examinations were furnished ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

64. ಫ್ರಾಸಾಃ 25 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, The cuttings/scrapings/mud of the blood stained exhibits were subjected to serological analysis. The origin was determined by the Gel diffusion method. Cross over electrophoresis and the blood grouping was determined by the absorption elution method ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

65. ಫ್ರಾಸಾಃ 25 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, Item No.1,3,4,5,6,7 and 8 were stained with Human Blood. Item No.1,3,4,5,6,7 and 8 were stained with AB group blood. With respect to the same I have issued the report along with articles and sample seal ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

66. ನೀವು ಬೇರೆ ಏನಾದರೂ ಹೇಳುವುದು ಇದೆಯಾ?

ಉತ್ತರಃ

67. ನಿಮ್ಮ ಪರ ಪ್ರತಿರಕ್ಷಣಾ ಸಾಕ್ಷಿ ಇದೆಯೇ?

ಉತ್ತರಃ

(ಮೇಲಿನ ಪ್ರಶ್ನೆಗಳನ್ನು ಆರೋಪಿತನಿಗೆ ಓದಿ ಹೇಳಿದ್ದು, ಆತನು ನೀಡಿದ ಉತ್ತರವನ್ನು ನಾನು ಸ್ವಯಂ ದಾಖಲಿಸಿ, ಆರೋಪಿತನು ನೀಡಿದ ನಿಜ ಉತ್ತರವೆಂದು ದೃಢೀಕರಿಸಿದ್ದೇನೆ.)

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು.**